# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2170 (2456) |
| ಸದಸ್ಯರ ಹೆಸರು | : | ಶ್ರೀ ಡಾ: ಚಂದ್ರಶೇಖರ್ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27/03/2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚಿತ್ರಕಲಾ ಶಿಕ್ಷಕರುಗಳಿಗೆ ವೇತನ ತಾರತಮ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು?</td><td>
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಿಗೆ ಬೋಧಕ/ಬೋಧಕೇತರ ಹುದ್ದೆಗಳು ಮಂಜೂರಾಗಿರುವ ಆದೇಶಗಳಲ್ಲಿ ಹುದ್ದೆಗಳಿಗೆ ವೇತನ ಶ್ರೇಣಿಗಳನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ. ಆದೇಶ ಸಂಖ್ಯೆ: ಸಕಇ 61 ಮೊದೇಶಾ 2006 ದಿನಾಂಕ: 20.11.2006 ರಲ್ಲಿ ಚಿತ್ರಕಲಾ ಮತ್ತು ಸಂಗೀತ ಶಿಕ್ಷಕರ ವೇತನ ಶ್ರೇಣಿಗೂ ಹಾಗೂ ಇತರೆ ಶಿಕ್ಷಕರ ವೇತನ ಶ್ರೇಣಿಗೂ ವ್ಯತ್ಯಾಸ ವಿರುತ್ತದೆ.
<table>
<tr><th>ವಿವರ</th><th>ಭಾಷಾ ಮತ್ತು ಐಚ್ಛಿಕ ಶಿಕ್ಷಕರ ವೇತನ ಶ್ರೇಣಿ</th><th>ಚಿತ್ರಕಲಾ ಶಿಕ್ಷಕರ ವೇತನ ಶ್ರೇಣಿ</th></tr>
<tr><td>2006ರ ಹುದ್ದೆ ಮಂಜೂರಾತಿ ಆದೇಶದಂತೆ</td><td>4575-8400</td><td>4150-7800</td></tr>
<tr><td>2011</td><td>8825-16000</td><td>8000-14800</td></tr>
<tr><td>2012</td><td>17650-32000</td><td>16000-29600</td></tr>
<tr><td>2018</td><td>33450-62600</td><td>30350-58250</td></tr>
<tr><td>2024</td><td>54175-99400</td><td>49050-92500</td></tr>
</table>
ಆರ್ಥಿಕ ಇಲಾಖೆಯು ಅನುಮೋದಿಸಿರುವಂತೆ ಸರ್ಕಾರದ ಆದೇಶಗಳಲ್ಲಿ ನಿಗಧಿಪಡಿಸಿದ ವೇತನ ಶ್ರೇಣಿಯನ್ವಯ 2011 ರಲ್ಲಿ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಆದರೆ, ಮಾನ್ಯ ನ್ಯಾಯಾಲಯದ ಆದೇಶದಂತೆ ಚಿತ್ರಕಲಾ ಶಿಕ್ಷಕರ ನೇಮಕಾತಿ ಅಧಿಸೂಚನೆ ರದ್ದಾಗಿರುತ್ತದೆ. ಆದ್ದರಿಂದ, ಈ ಅವಧಿಯಲ್ಲಿ ಯಾವುದೇ ಚಿತ್ರಕಲಾ ಶಿಕ್ಷಕರು ನೇಮಕವಾಗಿರುವುದಿಲ್ಲ. ಸಂಗೀತ ಶಿಕ್ಷಕರು ಸೇರಿದಂತೆ ಇತರೆ ಶಿಕ್ಷಕರು 2011ರಲ್ಲಿ ನೇಮಕಗೊಂಡಿರುತ್ತಾರೆ.
2011ರಲ್ಲಿ ರದ್ದುಪಡಿಸಲಾಗಿದ್ದ ಅಧಿಸೂಚನೆಯನ್ನು 2016ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಸರ್ಕಾರದ ಆದೇಶಗಳಲ್ಲಿ ಹಾಗೂ 2011ರ ಅಧಿಸೂಚನೆಯಲ್ಲಿ ನಿಗಧಿಪಡಿಸಿದ ವೇತನ ಶ್ರೇಣಿಯನ್ವಯ ಪದವೀಧರ ಮತ್ತು ಡಿಪ್ಲೊಮ ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ಅಧಿಸೂಚಿಸಲಾಗಿರುತ್ತದೆ.
</td></tr>
</table>

| | | |
|---|---|---|
| | | 2016ರಲ್ಲಿ ಅಧಿಸೂಚಿಸಲಾದ ಪದವೀಧರ ಚಿತ್ರಕಲಾ ಶಿಕ್ಷಕರ ಹುದ್ದೆಗಳ ಆಯ್ಕೆಪಟ್ಟಿಯನ್ನು ದಿನಾಂಕ: 02.07.2022 ರಲ್ಲಿ ಹಾಗೂ ಡಿಪ್ಲೊಮ ಚಿತ್ರಕಲಾ ಶಿಕ್ಷಕರ ಹುದ್ದೆಗಳ ಆಯ್ಕೆಪಟ್ಟಿಯನ್ನು ದಿನಾಂಕ: 10.11.2022ರಲ್ಲಿ ಆಯೋಗವು ಹೊರಡಿಸಿರುತ್ತದೆ. ಅದರಂತೆ ಸಂಘವು ದಾಖಲಾತಿ ಪರಿಶೀಲನೆ ಕೈಗೊಂಡು, ನಿಯಮಾನುಸಾರ 2016ರ ಅಧಿಸೂಚನೆಯಲ್ಲಿ ನಿಗಧಿಪಡಿಸಿದ ವೇತನ ಶ್ರೇಣಿ ರೂ. 16000-29600ರನ್ವಯ 2022-23ನೇ ಸಾಲಿನಲ್ಲಿ ಸಮಾನಾಂತರ ಪರಿಷ್ಕೃತ ವೇತನ ಶ್ರೇಣಿ ರೂ. 30350-58250 ರಂತೆ ನೇಮಕಾತಿ ಆದೇಶವನ್ನು ಹೊರಡಿಸಲಾಗಿರುತ್ತದೆ.<br><br>ಚಿತ್ರಕಲಾ ಶಿಕ್ಷಕರ ವೇತನ ಶ್ರೇಣಿಯನ್ನು ಪರಿಷ್ಕರಿಸುವ ಸಂಬಂಧ ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರಿಂದ ಏಕಕಡತದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

**SWD/137/MDS/2026**

**(ಡಾ: ಹೆಚ್.ಸಿ ಮಹದೇವಪ್ಪ)**

ಸಮಾಜ ಕಲ್ಯಾಣ ಸಚಿವರು.